ಹೇಳಿದರೆ ಅದನ್ನು ಪಡೆಯಲು ಸಾಧ್ಯವಿಲ್ಲದಂಥ ಪರಿಸ್ಥಿತಿಯು ಈ ಒಂದು ಕಾರಣದಿಂದ ಇದೆ. ಅದಕ್ಕೋಸ್ಕರವಾಗಿ ತಾವು ಇದನ್ನು ಪರಿಶೀಲನೆ ಮಾಡಿ ರೂಲಿಂಗ್‌ನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

Sri Harnahally Ramaswamy:- The Opposition Leaders have not able to control him.

ಶ್ರೀ ಹೆಚ್.ಏಕಾಂತಯ್ಯ:- ನಾಲ್ಕೂವರೆ, ಐದುಗಂಟೆಗೆ ಇಲ್ಲಿ ಪಾಸ್ ಮಾಡಿ ನಂತರ ಇದಕ್ಕೆ ಗವರ್ನರ್‌ರವರ ಶಿಫಾರಸ್ಸನ್ನು ತಂದಿದ್ದೇವೆ ಎಂದು ಹೇಳಿದರೆ ನಾವು ಇದನ್ನು ಒಪ್ಪಿಕೊಳ್ಳಬೇಕೆ? ತಪ್ಪಾಗಿದ್ದರೆ ತಪ್ಪು ಎಂದು ಹೇಳುವುದನ್ನು ಬಿಟ್ಟು ನಾವು ಮಾಡಿದ್ದೇ ಸರಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು:- ಈಗ ನನ್ನ ಕೈಯಲ್ಲಿ ಗವರ್ನರ್‌ರವರ ಸಹಿ ಆಗಿರುವ ಕಾಗದ ಬಂದಿದೆ. ಆದಕ್ಕೆ ತಾವು ಏನು ಪಾಯಿಂಟ್ ಆಫ್ ಆರ್ಡರ್....

ಶ್ರೀ.ಹೆಚ್.ಏಕಾಂತಯ್ಯ:- ಇವೊತ್ತಿನ ದಿವಸ ಈ ಒಂದು ಪರಿಸ್ಥಿತಿಯಲ್ಲಿ, ಮಾನ್ಯ ಗವರ್ನರ್‌ರವರು ಊರಿನಲ್ಲಿ ಇಲ್ಲದಿರತಕ್ಕಂಥ ಪರಿಸ್ಥಿತಿಯಲ್ಲಿ ಇವೊತ್ತಿನ ದಿವಸ ಅವರು ಇಂಥ ಒಂದು ಶಿಫಾರಸ್ಸನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ, ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ.ಎಂ.ವೀರಪ್ಪ ಮೊಯ್ಲಿ:- ಸನ್ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ಮಂಡಿಸುತ್ತಾ ಇದ್ದೇನೆ.

ಶ್ರೀ.ಹೆಚ್.ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ನನ್ನ ವಿಧಿಬಿಂದು ಏನಾಯಿತು ಎಂಬುದನ್ನು ದಯಮಾಡಿ ತಿಳಿಸ ಬೇಕು. Is it disallowed?

Mr.Speaker:-It is disallowed. ನನ್ನ ಹತ್ತಿರ ಗವರ್ನರ್‌ರವರ ಸಹಿ ಆಗಿರುವ ಕಾಗದ ಬಂದಿದೆ. ಹಾಗಾಗಿ ತಾವುಗಳು ಮಾಡಿದ ಪ್ರಸ್ತಾವನೆ ಸರಿಯಿಲ್ಲ.

ಶ್ರೀ.ಹೆಚ್.ಏಕಾಂತಯ್ಯ:- ಆಯಿತು, ನೋಡೋಣ...

ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) ವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2)ವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯ್ಲಿ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) 1993 ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ III

1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.3)

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) :- ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.3) ವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.''

ಶ್ರೀ ಹೆಚ್. ವಿಶ್ವನಾಥಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೂ ಕೂಡ ನಾನು ಅದೇ ವಿಧಿ ಬಿಂದು ಎತ್ತುತ್ತೇನೆ. ಇದರ ಬಗ್ಗೆಯೂ ಸಹ ಆದೇಶವನ್ನು ಕೊಡಬೇಕು.

ಅಧ್ಯಕ್ಷರು:- ಪ್ರಸ್ತಾವನೆ ಏನೆಂದರೆ, ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ(ನಂ.3)ವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗಿಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೇ, ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.3)ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ IV

1993ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೇ, ''1993ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''1993ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು:-''ಖಂಡ 2 ರಿಂದ 3ರವರೆಗೂ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.